<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ02-02-2019ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು</u> ಃ- ಶ್ರೀ ಎನ್ ಜಿ ಕೆ ವಕೀಲರಿಂದ ಃ-ಸ

ನನ್ನ ತಾತಾನ ಹೆಸರು ಮೋಟಯ್ಯ. ಸದರಿ ಮೋಟ್ಯಯ್ಯರವರಿಗೆ ಇಬ್ಬರು ಸಹೋದರರು ಅವರುಗಳ ಹೆಸರು ನನಗೆ ನೆನಪಿಲ್ಲ. ಮೋಟಯ್ಯರವರಿಗೆ ಸೋಮಯ್ಯ ಮತ್ತು ಮುತ್ತಣ್ಣ ಎಂಬ ಅಣ್ಣಂದಿರು ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಹೆಸರು ನಿಖರವಾಗಿ ಗೊತ್ತಿಲ್ಲವೆಂದು ಹೇಳುತ್ತಾರೆ. ಮೋಟಯ್ಯರವರಿಗೆ ನನ್ನ ತಂದೆ ಮಾದಯ್ಯ ಒಬ್ಬನೆ ಮಗ ಎಂದೆರ ಸರಿ. ನನ್ನ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನ್ನ ತಂದೆ, ನಾನು ಮತ್ತು ನನ್ನ ಅಕ್ಕ-ತಂಗಿಯವರಿಗೆ ಹಕ್ಕು ಇರುತ್ತದೆ ಎಂದರೆ ಸರಿ.

ಮೋಟಯ್ಯರವರ ಅಣ್ಣನಾದ ಸೋಮಯ್ಯರವರಿಗೆ ಪೂವಯ್ಯ, ಅಯ್ಯಪ್ಪ, ಪಾರ್ವತಿ, ಶಾರದ ಮತ್ತು ಕುಶಾಲಪ್ಪ ಎಂಬ ಮಕ್ಕಳು ಎಂದರೆ ಸರಿ. ಮೋಟಯ್ಯರವರ ಅಣ್ಣನಾದ ಮುತ್ತಣ್ಣರವರಿಗೆ ಸುಬ್ಬಯ್ಯ ಎಂಬ ಮಗ ಎಂದರೆ ಸರಿ. ಸದರಿ ಸುಬ್ಬಯ್ಯರವರಿಗೆ ಸುಬ್ರಮಣಿ, ಶಾಂತಿ, ಜ್ಯೋತಿ ಮತ್ತು ಸ್ವಾತಿ ಎಂಬ ಮಕ್ಕಳು ಎಂದರೆ ಸರಿ.

ಸದರಿ ಪೂವಯ್ಯರವರಿಗೆ ಸುರೇಶ್, ನಂಜಪ್ಪ, ವಿಶಾಲಾಕ್ಷಿ, ಕಾಮಾಕ್ಷಿ, ಶ್ರೇಯಾಲಾಕ್ಷಿ ಮತ್ತು ಶೋಭಾ ಎಂಬ ಮಕ್ಕಳು ಎಂದರೆ ಸರಿ. ಅದೇರೀತಿ ಕುಶಾಲಪ್ಪರವರಿಗೆ ಗೀತಾ ಮತ್ತು ಗಿರೀಶ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಗಿರೀಶ್‌ರವರು ಪ್ರಾ.ಸಾ.3 ರಂತೆ ಈ ದಾವೆಯಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿ.

ಅಯ್ಯಪ್ಪರವರಿಗೆ ಮೊಣ್ಣಪ್ಪ ಮತ್ತು ಬೋಪಣ್ಣ ಎಂಬ ಮಕ್ಕಳಿದ್ದು ಬೋಪಣ್ಣರವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ.

ಈ ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ನಡುವೆ ವಿಭಾಗ ವಾಗಿರುತ್ತದೆ ಎಂದು ಹೇಳಿದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿ.

ಜಮ್ಮಾ ಆಸ್ತಿಗಳನ್ನು ಪರಬಾರೆ ಮಾಡಬಾರದು ಎಂದು ಕಾನೂನು ಇರುತ್ತದೆ ಎಂದರೆ ಸರಿ. ಸದರಿ ಕಾನೂನು 1993ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅನೂರ್ಜಿತವಾಗುವವರೆಗೂ ಜಾರಿಯಲ್ಲಿ ಇತ್ತು ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಕಾನೂನು ಜ್ಞಾನ ಇಲ್ಲವೆಂದು ಹೇಳುತ್ತಾರೆ. ಕೂರ್ಗ್

ರಿಜಿಸ್ಟ್ರೇಷನ್ ಆ್ಯಕ್ಟ್ ಆ ಸಮಯದವರೆಗೂ ಜಾರಿಯಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಕೂರ್ಗ್ ರಿಜಿಸ್ಟ್ರೇಷನ್ ಆ್ಯಕ್ಟ್ ಪ್ರಕಾರ ನಮ್ಮ ಕುಟುಂಬದ ಪೂವಯ್ಯ ಮತ್ತು ಕುಶಾಲಪ್ಪ ರವರು ಅವರ ಭಾಗದ 15ಸೆಂಟ್ಸ್ ಮತ್ತು 15ಸೆಂಟ್ಸ್ ಒಟ್ಟು 30ಸೆಂಟ್ಸ್ ಆಸ್ತಿಯನ್ನು 1 ಮತ್ತು 2ನೇ ಪ್ರತಿವಾದಿಯವರ ತಂದೆಯಾದ ಅಪ್ಪಣ್ಣ ಯಾನೆ ರಾಜು ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಈ ರೀತಿ ಮಾರಾಟಮಾಡಿದ ನಂತರದಲ್ಲಿ ಆ ಅವಧಿಯ ಪಂಚಾಯಿತಿಯ ಚೆರ್‌ಮನ್ ರವರ ಸಮಕ್ಷಮದಲ್ಲಿ ದಾಖಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ದೇಯಂಡ ಕಾಳಯ್ಯರವರು ಸಾಕ್ಷಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ದಿಃ24.1.1982 ರಂದು ಮಾಡಿದ್ದು ಆ ಸಮಯದಿಂದಲೂ ಸಹಃ ಅಪ್ಪಣ್ಣ ಯಾನೆ ರಾಜು ರವರು ಸದರಿ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.98ಃ2ರ ಆಸ್ತಿಯಲ್ಲಿ ಪೂವಯ್ಯ ಮತ್ತು ಕುಶಾಲಪ್ಪ ರವರಿಗೆ ಹಕ್ಕು ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದರಿಂದಲೆ ನಾನು ವಾದ ಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗೊಂದಲವಿತ್ತು ಎಂದು ನಮೂದು ಮಾಡಿರುತ್ತೇನೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಪ್ರತಿವಾದಿಯವರು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಅದನ್ನು ಅವರು ಹಕ್ಕಾಗಿ ಅನುಭವಿಸುತ್ತಿದ್ದಾರೆ ಎಂದರೆ ಸುಳ್ಳು. ಸದರಿ ಆಸ್ತಿಯ ಕ್ರಯ ಪತ್ರವು ಅವರ ಹೆಸರಿಗೆ ನೊಂದಣಿಯಾಗದೇ ಇದ್ದ ಕಾರಣ ಸದರಿ ಆಸ್ತಿಯ ಪಹಣಿಯು ಅಪ್ಪಣ್ಣರವರಿಗೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ.

ಓ. ಹೇ. ಕೇ. ಸ. ಇ. ಎ. ಒ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಪೊನ್ನಂಪೇಟೆ.